ತಾರೀಖು 11ನೇ ಡಿಸೆಂಬರ್ 1894.

ನಂ. 9636.—ಆರ್. ಯಫ್. 215—92. ಮೈಸೂರು ಶ್ರೀಮ ಮಹಾರಾಜಾ ಸರ್ಕಾರದವರು, XXIIIನೇ ನಂಬರ್ ಲ್ಯಾಂಡ್ ರೆವಿನ್ಯೂ ರೂಲಿನ 6ನೇ ಪ್ಯಾರಾ ಅನಂತರ ಇದರಡಿ ಬರುವದನ್ನ 6Aನೇ ಪ್ಯಾರಾ ಯಂಬದಾಗಿ ಸೇರಿಸಲ್ಪಡತಕ್ಕದ್ದೆಂದು ಆಜ್ಞಾ ಪಿಸುತ್ತಾರೆ :—

"6 A. 3, 4, 5 ವ 6 ಪ್ಯಾರಾಗಳಲ್ಲಿ ಅಡಗಿರತಕ್ಕ ಹಿಂದಿನ ರೂಲ್ಸ್‌ಗಳು, ಯಾವ ರೈಲ್ವೇ ಸ್ಟೇಷನ್ ಸರಹದ್ದಿನ ಅರ್ಧ ಮೈಲ್ ಒಳಗಾಗಿ ಇರುವಂಥಾ ಜಮೀನುಗಳಿಗೆ ಲಗಾವಾಗತಕ್ಕದ್ದಲ್ಲವು. ಈ ವಿಷಯಗಳಲ್ಲಿ 63 ವ 64ನೇ ಸೆಕ್ಷನ್‌ಗಳ ನಿಯಮಗಳು ಖಂಡಿತವಾಗಿ ಜಾರೀಲಿ ತರಲ್ಪಡತಕ್ಕದ್ದು.

ಮೇಲೆ ನಮೂದ್ಮಾಡಲ್ಪಟ್ಟ ಸರಹದ್ದುಗಳವಳಗಿನ ಯಾವ ಜಮೀನನ್ನ ಹೊಂದುವದಕ್ಕೇ ಆಗಲಿ ಸಾಗುವಳಿಗೆ ಅಲ್ಲದ ಇತರ ಕೆಲಸಗಳಿಗೆ ದರಖಾಸ್ತು ಬಂದ ಸಮಯದಲ್ಲಿ ಲ್ಯಾಂಡ್ ರೆವಿನ್ಯೂ ಕೋಡಿನ 48ನೇ ಸೆಕ್ಷನ್(ಬಿ) ವ (ಸಿ) ಕ್ಲಾಜುಗಳಿಗನುಸಾರವಾಗಿ ಯಾವ ದಾದರೂ ಕಂದಾಯವನ್ನ ಹಾಕುವದಕ್ಕೂ ಅಥವಾ ಆ ಜಮೀನನ್ನ ಕೊಡುವದಕ್ಕೂ ಮುಂಚೆ ಡೆಪ್ಯುಟಿ ಕಮ್ಮಿಷನರವರು ಮುಂದಾಗೇ ಗವರ್ಮೆಂಟಿನವರ ಮಂಜೂರಾತಿಯನ್ನು "ಪಡಿಯತಕ್ಕದ್ದು."

2. XXನೇ ನಂಬರ್ ಲ್ಯಾಂಡ್ ರೆವಿನ್ಯೂ ರೂಲಿನ 7ನೇ ಪ್ಯಾರಾ ಅನಂತರ ಇದರಡಿ ಬರುವದನ್ನ 7 A. ಪ್ಯಾರಾ ಯಂಬದಾಗಿ ಸೇರಿಸತಕ್ಕದ್ದು.

"7 A. ಯಾವದಾದರೂ ರೈಲ್ವೇ ಸ್ಟೇಷನ್ ಸರಹದ್ದಿನ ಅರ್ಧ ಮೈಲ್ ಒಳಗಾಗಿ ಇರತಕ್ಕ ಹಿಂಪುವಳ್ಳಿಲಿ ಇಲ್ಲದ ಸರ್ಕಾರ್ ಜಮೀನು, ಪ್ರತಿ ಸಂದರ್ಭದಲ್ಲಿಯೂ ಗವರ್ಮೆಂಟಿನವರ ಮಂಜೂರಾತಿಯನ್ನು ಮುಂದಾಗಿ ಪಡಿಯದೇ ಯಾವ ವಿಧವಾದ ಸ್ವಂತ ಹಿಡುವಳಿಗೋಸ್ಕರವಾಗಲಿ, ಕೊಡಲ್ಪಡಕೂಡದು.

ತಾರೀಖು 15ನೇ ಡಿಸೆಂಬರ್ 1894.

ನಂ. 9937.—ಜೆ. 563.—1890ನೇ ಇಸವಿ VIನೇ ನಂಬರ್ ಆರ್‌ಮ್ಸ್ ರೆಗ್ಯುಲೇಷನಿನ 22ನೇ ಸೆಕ್ಷನಿನಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಮೈಸೂರು ಸರ್ಕಾರದವರು ಸದರೀ ರೆಗ್ಯುಲೇಷನಿನ 8 ವ 9ನೇ ಸೆಕ್ಷನ್‌ಗಳಲ್ಲಿ ಅಡಗಿರತಕ್ಕ ನಿರೋಧಗಳಿಂದ ಚಿತ್ರದುರ್ಗದ ಮುರ್ಗಿ ಮಠದ ಶ್ರೀ ಮುನಿರಂಜನ್ವ ಮುಮ್ಮುನವಮ್ಮುರ್ಯಂದ್ರಸ್ವೆಮಮವರನ್ನ ವಿನಾಯಿಸುತ್ತಾರೆ.

ತಾರೀಖು 18ನೇ ಡಿಸೆಂಬರ್ 1894.

900.—ಯಲ್.—ಯಫ್. 257—92. 1894ನೇ ಇಸವಿ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ ನಿಯಮಗಳನುಸರಿಸಿ ಇದರಿಂದ ಪ್ರಕಟ ಪಡಿಸುವದೇನಂದರೆ, ಇದಕ್ಕೆ ಲಗತ್ತಾಡಲ್ಪಟ್ಟ ಷೆಡ್ಯೂಲಿನಲ್ಲಿ ನಮೂದಾದ ಮುನಿಸಿಪಲ್ ಕೆಲಸಕ್ಕೆ ಅಂದರೆ ಮೇಗಳ ಕೆರೆಯಿಂದ ಚನ್ನರಾಯಪಟ್ಟಣದಲ್ಲಿನ ಬಂಡಿವೋಟಿನ ಪರಿಯಂತ ಬಂದು ರಸ್ತೇ ಬೇಕಾಗಿರುತ್ತೆ :—

೩—ಹಾಸನ.	ಬೇಕಾದ ವಿಸ್ತೀರ್ಣ—ಸರ್ವೇ ನಂಬರ್ 15—4 ಕುಂಟೆ ಖುಸ್ಕಿ ಜಮೀನು.
೨—ಚನ್ನರಾಯಪಟ್ಟಣ.	ಕಂದಾಯ—2 ಆಣೆ
೪—ಚನ್ನರಾಯಪಟ್ಟಣ.	ಚಕ್ಕುಬಂದೀ—ಪೂರ್ವಕ್ಕೆ ಸರ್ವೇ ನಂಬರ್ 16—17.
—ಚನ್ನರಾಯಪಟ್ಟಣ.	ಪಶ್ಚಿಮಕ್ಕೆ ಸರ್ವೇ ನಂಬರ್ 21 ವ ವೋಣಿ.
ಯಿದಾರನ ಹೆಸರು—ಚಾವನಯ್ಯದ್ದೇಗೌಡ.	ಉತ್ತರಕ್ಕೆ ಚನ್ನರಾಯಪಟ್ಟಣದ ಪ್ಯಾಟೆ.
	ದಕ್ಷಿಣಕ್ಕೆ ಮ್ಯುನಿಸಿಪಲ್ ರಸ್ತೆ.
	ಪರಾ—ರಸ್ತೇ ಮಾಡುವದಕ್ಕೆ.

ತಾರೀಖು 20ನೇ ಡಿಸೆಂಬರ್ 1894.

ನಂ. 10259.—ಜಿ. 2390.—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಮೇರೆ, ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ವೈಸ್ ಪ್ರೆಸಿಡೆಂಟ್, ಮೆಸ್ಟರ್ ಹೆಚ್. ನಂಜುಂಡರಾಜ್ ಅರಸಿನವರಿಗೆ ಕ್ರಿಸ್‌ಮಸ್ ರಜಾಗಳಾವನಂತರ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 20 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

2. ಮೆಸ್ಟರ್ ಹೆಚ್. ನಂಜುಂಡರಾಜ್ ಅರಸಿನವರು ರಜಾದಲ್ಲಿರುವ ಕಾಲದಲ್ಲಿ, ಸಿಟಿ ಮ್ಯುನಿಸಿಪಾಲಿಟಿ ಮ್ಯುನಿಸಿಪಲ್ ಇಂಜನೀರವರು ತಮ್ಮ ಸ್ವಂತ ಕೆಲಸಗಳೊಂದಿಗೆ ವೈಸ್ ಪ್ರೆಸಿಡೆಂಟ್ ಆಫಿಸ್ ಚಾರ್ಜನ್ನು ವಹಿಸಿರತಕ್ಕದ್ದು.